ಮಾದಗೋಪಾಲ ಹಡಗಲಿ ಶಾಖೆಗೆ ಸೇರಿದ ಹಾಗೂ ಕೆಲಸ ಕಾಯಂ ಆದ ದಿನಾಂಕ, ಕ್ಯಾಷ್ ಕೆಲಸ ನಿರ್ವಹಿಸಲು ನೀಡಿದ ಆದೇಶ, ಇಟಗಿ ಬ್ರಾಂಚಿಗೆ ಫಂಡ್ ರವಾನಿಸಿದ ಮತ್ತು ರಿವರ್ಸ್ ಮಾಡಿದ ದಾಖಲೆಗಳನ್ನು ಮ್ಯಾನೇಜ್‌ಮೆಂಟ್ ಪ್ರತಿನಿಧಿ ಒದಗಿಸಿದರು. ಸಾವಿತ್ರಮ್ಮ ಮಾದಗೋಪಾಲನ ಅಕ್ಕ ಎನ್ನುವುದನ್ನು ಸಿದ್ಧಪಡಿಸುವ ಪುರಾವೆ, ಒಡವೆ ಹರಾಜಿನ ನೋಟೀಸು ಪ್ರತಿಗಳು ಜೊತೆಗಿದ್ದವು.

'ದಾಖಲೆಗಳ ಬಗೆಗೇನಾದರೂ ಆಕ್ಷೇಪವಿದೆಯೇ', ವಾಮನ ನೀಲೇಶ್ವರ ವಿಚಾರಿಸಿದರು. ನಾಗೇಂದ್ರಪ್ಪ ತಲೆಯಲ್ಲಾಡಿಸಿದರು. ಮ್ಯಾನೇಜ್‌ಮೆಂಟ್ ಪ್ರತಿನಿಧಿ ಮುಂದುವರಿಸಿದರು...

ಮ್ಯಾನೇಜ್‌ಮೆಂಟ್ ಪ್ರತಿನಿಧಿ: ಮಾದಗೋಪಾಲ ಕೆಲಸದಲ್ಲಿ ಬಹಳ ಹುಷಾರು. ಆನ್‌ಲೈನ್ ಟ್ರಾನ್ಸಾಕ್ಷನ್‌ನಲ್ಲಿ ಎಕ್ಸ್‌ಪರ್ಟ್. ಅದನ್ನು ಉಪಯೋಗಿಸಿ ಯಾಮಾರಿಸಲು ನೋಡಿದ್ದಾನೆ.

ವಾಮನ ನೀಲೇಶ್ವರ: ಹೇಗೆ? ವಿವರಿಸಿ.

ಮ್ಯಾ ಪ್ರ: ಅವನೇ ಕ್ಯಾಷ್ ಡಿಪಾರ್ಟ್‌ಮೆಂಟಲ್ಲಿ ಇದ್ದಿದ್ರಿಂದ ಕ್ಯಾಷ್ ಕಟ್ಟದಿದ್ದರೂ ಟ್ರಾನ್ಸ್‌ಫರ್ ಮಾಡಬಹುದು. ಹಾಗೇ ಮಾಡಿದ್ದಾನೆ. ಖಾತೆಗೆ ದುಡ್ಡು ಬಂದ ತಕ್ಷಣ ಒಡವೆ ಬಿಡಿಸ್ಕೊ ಅಂತ ಅಕ್ಕನಿಗೆ ಹೇಳಿದ್ದಾನೆ.

ವಾ ನೀ: ಸಿಕ್ಕಿಬೀಳುತ್ತೇನೆಂದು ಗೊತ್ತಿರಲಿಲ್ಲವೇ?

ಮ್ಯಾ ಪ್ರ: ಸಂಜೆ ಕ್ಯಾಷ್ ಕ್ಲೋಸ್ ಮಾಡುವಾಗ ಅಮೌಂಟ್ ರಿವರ್ಸ್ ಮಾಡಿದ್ದಾನೆ. ಕ್ಯಾಷ್ ಟ್ಯಾಲಿ ಆಗಿದ್ರಿಂದ ಯಾರಿಗೂ ತಿಳಿಯುವುದಿಲ್ಲ ಅಂದುಕೊಂಡಿದ್ದ.

ವಾ ನೀ: ಡೆಬಿಟ್ ಬ್ಯಾಲೆನ್ಸನ್ನು ಸಂಬಂಧಪಟ್ಟವರು ಗಮನಿಸುವುದಿಲ್ಲವೇ?

ಮ್ಯಾ ಪ್ರ: ಡೆಬಿಟ್ ಬ್ಯಾಲೆನ್ಸ್ ಗಮನಕ್ಕೆ ಬಂದರೆ ಸಾಮಾನ್ಯವಾಗಿ ಅಕೌಂಟ್ ಹೋಲ್ಡರನ್ನು ಕರೆಸುತ್ತಾರೆ.

ವಾ ನೀ: ಈ ಪ್ರಕರಣದಲ್ಲಿ ಮಾದಗೋಪಾಲನ ಬ್ರಾಂಚಿಗೆ ಫೋನ್ ಯಾಕೆ ಮಾಡಿದ್ರು?

ಮ್ಯಾ ಪ್ರ: ಸಾವಿತ್ರಮ್ಮನ ಸೇವಿಂಗ್ಸ್ ಅಕೌಂಟಿಂದ ಒಡವೆ ಸಾಲಕ್ಕೆ ಜಮಾ ಆಗಿದೆ. ಕ್ಲೋಸ್ ಆದ ಜ್ಯುಯೆಲ್ ಲೋನ್ ಚೆಕ್ ಮಾಡಿದಾಗ ಸಾವಿತ್ರಮ್ಮನ ಅಕೌಂಟ್ ಮೈನಸ್ ಬ್ಯಾಲನ್ಸ್ ಆಗಿದ್ದು ಗೊತ್ತಾಗಿ ಮ್ಯಾನೇಜರ್‌ಗೆ ಗಾಬರಿಯಾಗಿದೆ. ಒಡವೆ ಕೊಟ್ಟಾಗಿತ್ತು. ಸಾವಿತ್ರಮ್ಮನ ಖಾತೆಗೆ ಹಣ ಎಲ್ಲಿಂದ ಬಂದಿತ್ತು ಎಂದು ನೋಡಿದ್ದಾರೆ. ಹಡಗಲಿಯಿಂದ ಟ್ರಾನ್ಸ್‌ಫರ್ ಆಗಿದೆ ಎಂದ ಕೂಡಲೇ ಫೋನ್ ಮಾಡಿ ತಿಳಿಸಿದ್ದಾರೆ. ಅದ್ರಿಂದ ವಂಚನೆ ಮಾಡಿದ್ದು ಗೊತ್ತಾಗಿದೆ.

ವಾ ನೀ: ವಂಚನೆ ಎಂದು ಹೇಗೆ ಹೇಳುವಿರಿ?

ಮ್ಯಾ ಪ್ರ: ಟ್ರಾನ್ಸ್‌ಫರ್ ಮತ್ತು ರಿವರ್ಸ್ ಮಾದಗೋಪಾಲನ ಐಡಿಯಲ್ಲೇ ಆಗಿದೆ. ಹಣ ಕಳಿಸಿದ ಅರ್ಧಗಂಟೆಯಲ್ಲಿ ಸಾವಿತ್ರಮ್ಮ ಇಟಗಿ ಬ್ರಾಂಚಿಗೆ ಹೋಗಿ ಪಾಸ್‌ಬುಕ್ ಎಂಟ್ರಿ ಮಾಡಿಸಿದ್ದಾಳೆ. ಇಲ್ಲಿ ನೋಡಿ, ಇವೆಲ್ಲ ನಾನು ಕೊಟ್ಟ ದಾಖಲೆಯಲ್ಲಿವೆ (ದಾಖಲೆಗಳನ್ನು ತೋರಿಸುವರು), ಸಮಯವೂ ನಮೂದಾಗಿದೆ. ಸಾವಿತ್ರಮ್ಮ ತನ್ನ ಅಕೌಂಟಿಗೆ ಬಂದ ಹಣ ಸಾಲಕ್ಕೆ ಜಮಾ ಮಾಡಿ, ಒಡವೆ ಪಡೆದಿದ್ದಾಳೆ. ಆದ್ದರಿಂದ ಇದು ಮೊದಲೇ ಯೋಜನೆ ಮಾಡಿದ ವಂಚನೆ ಎನ್ನುವುದರಲ್ಲಿ ಅನುಮಾನವಿಲ್ಲ.

ಮ್ಯಾನೇಜ್‌ಮೆಂಟ್ ಪ್ರತಿನಿಧಿಯ ವಿವರಣೆಯಿಂದ ಮಾದಗೋಪಾಲ ಕುಗ್ಗಿಹೋದ. ವಾಮನ ನೀಲೇಶ್ವರ ನಾಗೇಂದ್ರಪ್ಪನಿಗೆ ವಾದ ಮಂಡಿಸಲು ಕರೆ ನೀಡಿದರು. ಮ್ಯಾನೇಜ್‌ಮೆಂಟ್ ಪ್ರತಿನಿಧಿ ನೀಡಿದ ಹೇಳಿಕೆಗಳನ್ನು ಅಲ್ಲಗಳೆಯಲು ಅಗತ್ಯವಾದ ಹತ್ಯಾರುಗಳು ನಾಗೇಂದ್ರಪ್ಪನ ಬತ್ತಳಿಕೆಯಲ್ಲಿ ಇರಲಿಲ್ಲ. ಬದಲಾಗಿ ಅವರು ಮಾದಗೋಪಾಲನ ಬದುಕನ್ನು ತೆರೆದಿಟ್ಟರು.

ನಾಗೇಂದ್ರಪ್ಪ: ಮ್ಯಾನೇಜ್‌ಮೆಂಟ್ ಪ್ರತಿನಿಧಿ ಇಷ್ಟೆಲ್ಲ ದಾಖಲೆಗಳನ್ನು ಒದಗಿಸಿದ್ದಕ್ಕೆ ವಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಅವರು ಮಾದಗೋಪಾಲನ ಕುಟುಂಬದಲ್ಲಿ ವಿದ್ಯೆ ಕಲಿತವನು ಅವನೊಬ್ಬನೇ ಎನ್ನುವುದನ್ನು ಯಾಕೆ ಬಿಟ್ಟರೋ ತಿಳಿಯದು. ತಂದೆ, ತಾಯಿ ವಿದ್ಯೆ ಇಲ್ಲದಿದ್ದರೂ ಮಗನನ್ನು ಕಷ್ಟಪಟ್ಟು ಓದಿಸಿದ್ದಾರೆ. ಅದರಿಂದ ಬ್ಯಾಂಕ್ ಕೆಲಸಕ್ಕೆ ಸೇರುವಂತಾದ. ಮುಖ್ಯವಾದ ವಿಷಯವೆಂದರೆ, ಮಾದಗೋಪಾಲನಿಗೆ ಬ್ಯಾಂಕಿಂಗ್ ಪರೀಕ್ಷೆಯಲ್ಲೂ ಅತಿ ಹೆಚ್ಚು ಅಂಕ ಬಂದಿತ್ತು.

ಮ್ಯಾ ಪ್ರ: ವಿಚಾರಣೆಗೆ ಸಲ್ಲದ ವೈಯಕ್ತಿಕ ವಿಷಯಗಳನ್ನು ಹೇಳುತ್ತಿದ್ದಾರೆ. ವಿಚಾರಣಾಧಿಕಾರಿಯವರು ಇದಕ್ಕೆ ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ.

ನಾ: ವ್ಯಕ್ತಿಯನ್ನು ರೂಪಿಸುವಲ್ಲಿ ಅವನ ಹಿನ್ನೆಲೆ ಕೂಡಾ ಮುಖ್ಯ ಪಾತ್ರ ವಹಿಸುತ್ತದೆ. ಇದಕ್ಕೆ ಬೇಕಾದಷ್ಟು ಉದಾಹರಣೆಗಳನ್ನು ಕೊಡಬಹುದು. ಅವೆಲ್ಲ ಪ್ರಸ್ತಾಪ ಮಾಡುವುದಿಲ್ಲ. ಮಾದಗೋಪಾಲನ ವಿಷಯಕ್ಕೆ ಬಂದರೆ, ಅವನ ಮನೆಯ ಪರಿಸ್ಥಿತಿ ಏನೂ ಚೆನ್ನಾಗಿಲ್ಲ. ತಂದೆ ತಾಯಿಯನ್ನು ಸಾಕುವ ಜವಾಬ್ದಾರಿಯಿದೆ. ಅಕ್ಕನಿಗೂ ಕಷ್ಟ. ಅವಳ ಮನೆಗೆ ಹೋದಾಗ 'ಒಡವೆ ಹರಾಜಾಗುತ್ತದೆ, ಬಿಡಿಸಿಕೊಡು' ಎಂದಿದ್ದಾಳೆ. ಅವಳ ಮಾತಿನಿಂದ ದುಃಖ ಆಗಿದೆ. ಈ ಕಾಲದಲ್ಲಿ ರ‍್ಯಾಂಕ್ ಪಡೆದ ಹುಡುಗರಲ್ಲೂ ಮಾನವೀಯತೆ ಎನ್ನುವುದಿಲ್ಲ. ಹಾಗಿರುವಾಗ ಮಾದಗೋಪಾಲ ಯಾಕೆ ಮಾಡಿದ ಎನ್ನುವುದೂ ಮುಖ್ಯ ಆಗುತ್ತದೆ...

ವಾ ನೀ: ಮುಂದುವರಿಸಿ...

ನಾ: ಮಾದಗೋಪಾಲನ ಕೆಲಸ, ವರ್ತನೆಯ ಬಗ್ಗೆ ಯಾವ ಆಕ್ಷೇಪವೂ ಇಲ್ಲ. ಅವನು ನಿಷ್ಠೆಯಿಂದ ಹೇಳಿದ್ದೆಲ್ಲವನ್ನೂ ಮಾಡುತ್ತಿದ್ದ. ಕೆಲಸ ಕಾಯಂ ಆಗುವವರೆಗೆ ಲೇಟ್ ನೈಟ್ ಕೂರಿಸುತ್ತಿದ್ದರು. ಕಾಯಂ ಆದ ನಂತರ 'ಹೆಚ್ಚು ಹೊತ್ತು ಇರು' ಎಂದಿದ್ದಕ್ಕೆ, 'ಆಗುವುದಿಲ್ಲ, ಕೆಲಸದ ಟೈಮಲ್ಲಿ ಹೇಳಿ' ಎಂದಿದ್ದ. ಮ್ಯಾನೇಜರ್ ಅದನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡು ಮಟ್ಟ ಹಾಕುವ ಅವಕಾಶ ಕಾಯುತ್ತಿದ್ದರು.

ವಾ ನೀ: ನೀವು ಹೇಳುವುದು ಒಪ್ಪುವಂತದ್ದಲ್ಲ.

ನಾ: ಮ್ಯಾನೇಜರ್ ಮಾದಗೋಪಾಲನನ್ನು ಕರೆಸಿ ವಿಚಾರಿಸಬಹುದಿತ್ತು. ಹಾಗೆ ಮಾಡಲಿಲ್ಲ. ತಕ್ಷಣ ರೀಜನಲ್ ಆಫೀಸಿಗೆ ತಿಳಿಸಿದರು. ಇದರಿಂದ ಅವರ ಉದ್ದೇಶ ಅರ್ಥಮಾಡಿಕೊಳ್ಳಬಹುದು. (ಈ ಸಂದರ್ಭದಲ್ಲಿ ನಾಗೇಂದ್ರಪ್ಪ ಮಾದಗೋಪಾಲನ ಅಕೌಂಟಿನ ಪ್ರತಿಯನ್ನು ವಿಚಾರಣಾಧಿಕಾರಿಗೆ ಕೊಟ್ಟರು. ಅದನ್ನು ದಾಖಲೆಗೆ ತೆಗೆದುಕೊಳ್ಳಲಾಯಿತು) ಮಾದಗೋಪಾಲನ ಸ್ಯಾಲರಿ ಅಕೌಂಟ್ ಗಮನಿಸಿ. ಕೆಲಸಕ್ಕೆ ಸೇರಿ ವರ್ಷದ ಮೇಲಾದರೂ ಅಕೌಂಟಲ್ಲಿ ಕನಿಷ್ಠ ಮೊತ್ತ ಉಳಿಸಿಲ್ಲ. ಓದಿಗೆ, ಅಕ್ಕನ ಮದುವೆಗೆ, ತಂದೆ ತಾಯಿ ಮಾಡಿದ ಸಾಲ ತೀರಿಸುವುದಕ್ಕೆ ಒದ್ದಾಡುತ್ತಿದ್ದಾನೆ. ವಂಚನೆ ಮಾಡುವ ಉದ್ದೇಶ ಅವನಿಗೆ ಬಿಲ್‌ಕುಲ್ ಇರಲಿಲ್ಲ. ಉಣ್ಣುವ ಅನ್ನಕ್ಕೆ ಅವನೇಕೆ ಕಲ್ಲು ಹಾಕುತ್ತಾನೆ?

ವಾ ನೀ: ಕ್ಯಾಷ್ ತುಂಬದೇ ಕಳಿಸಿದ್ದಾನೆ. ಇದು ವಂಚನೆಯಲ್ಲವೇ?

ನಾ: ವಂಚನೆ ಮಾಡುವ ಉದ್ದೇಶದಿಂದ ಮಾಡಿದ್ದಲ್ಲ.

ವಾ ನೀ: ಹೇಗೆ ಹೇಳುತ್ತೀರಿ?

ನಾ: ಅಕ್ಕನಿಗೆ ಒಡವೆ ಬಿಡಿಸಿ ಹಡಗಲಿಗೆ ಬಾ ಎಂದು ಮಾದಗೋಪಾಲ ಹೇಳಿದ್ದ. ಹಡಗಲಿಯಲ್ಲಿ ಒಡವೆ ಅಡವಿಟ್ಟು ಟ್ರಾನ್ಸ್‌ಫರ್ ಮಾಡಿದ ಹಣ ತುಂಬಬಹುದು ಎಂದವನ ಯೋಚನೆ. ಒಡವೆ ಬಿಡಿಸಿ ಸಾವಿತ್ರಮ್ಮ ಮನೆಗೆ ಹೋಗಿದ್ದಾಳೆ. ಮಗುವಿಗೆ ಜ್ವರ ಇತ್ತು. ಡಾಕ್ಟರ್ ಹತ್ತಿರ ಹೋದ ಸಾವಿತ್ರಮ್ಮನಿಗೆ ಹಡಗಲಿಗೆ ಬರಲಿಕ್ಕೆ ಆಗಲಿಲ್ಲ. ಅವಳು ಬಂದಿದ್ದರೆ ಇದೆಲ್ಲ ಆಗುತ್ತಿರಲಿಲ್ಲ. ಸಂಜೆವರೆಗೂ ಹಣ ಕಟ್ಟಲು ಅವನಿಗೆ ಅವಕಾಶವಿತ್ತು. ಒಡವೆ ಅಡವಿಟ್ಟು ದುಡ್ಡು ತುಂಬುತ್ತಿದ್ದ.

ವಾ ನೀ: ಅಕ್ಕನನ್ನು ಬರಹೇಳಿದ್ದ ಎಂದು ಹೇಗೆ